**ಕರ್ನಾಟಕ ಸರ್ಕಾರ**
**ಸಹಕಾರ ಚುನಾವಣಾ ಆಯೋಗ**

ಸಂಖ್ಯೆ:ಸಚುಆ/ಪ.ಚು/55/2014

3ನೇ ಮಹಡಿ, ಶಾಂತಿನಗರ ಟಿ.ಟಿ.ಎಂ.ಸಿ. 'ಎ' ಬ್ಲಾಕ್,
ಶಾಂತಿನಗರ, ಬೆಂಗಳೂರು.
ದಿನಾಂಕ:31.05.2014

## ಸುತ್ತೋಲೆ

**ವಿಷಯ:-** ಫೆಡರಲ್ ಸಂಘಗಳ ಆಡಳಿತ ಮಂಡಳಿ ಚುನಾವಣೆ ತತ್ಪರಿಣಾಮವಾಗಿ ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವ ಕುರಿತು.

**ಉಲ್ಲೇಖ:-**
1) ಆಯೋಗದ ಅಧಿಸೂಚನೆ ಸಂಖ್ಯೆ: ಸಚುಆ/46/ಚುನಾವಣೆ/ಅ.ಸೂ/2013-14, ದಿನಾಂಕ:16.01.2014
2) ಆಯೋಗದ ಸುತ್ತೋಲೆ ಸಂಖ್ಯೆ:ಸಚುಆ/ಪ.ಚು/27/2013-14 ದಿನಾಂಕ:27.09.2013
3) ಆಯೋಗದ ಸುತ್ತೋಲೆ ಸಂಖ್ಯೆ:ಸಚುಆ/ಪದಧಾರಣ/51/2013-14 ದಿನಾಂಕ:21.02.2014

***

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಆಯೋಗದ ಉಲ್ಲೇಖಿತ ಅಧಿಸೂಚನೆಯಂತೆ ಫೆಡರಲ್ ಸಂಘಗಳ ಆಡಳಿತ ಮಂಡಲಿ ಚುನಾವಣೆಯನ್ನು ದಿನಾಂಕ24.05.2014 ರಿಂದ ದಿನಾಂಕ:26.05.2014ರ ಅವಧಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗೆ ಸೂಕ್ತವೆನಿಸಿದ ಯಾವುದೇ ದಿನಾಂಕದಂದು ಚುನಾವಣೆಯನ್ನು ನಡೆಸುವ ಬಗ್ಗೆ ನಿರ್ದೇಶಿಸಲಾಗಿತ್ತು ಹಾಗೂ ಸಂಬಂಧಿಸಿದ ಸಂಘಗಳಿಗೆ ರಿಟರ್ನಿಂಗ್ ಅಧಿಕಾರಿಗಳನ್ನು ನೇಮಕ ಮಾಡಲಾಗಿತ್ತು. ಅದರಂತೆ ಸಂಬಂಧಿಸಿದ ಫೆಡರಲ್ ಸಂಘಗಳ ಮಂಡಲಿಗಳ ಚುನಾವಣೆ ನಡೆದಿರುವ ವಿಷಯ ಆಯೋಗದ ಗಮನಕ್ಕೆ ಬಂದಿರುತ್ತದೆ. ಆಡಳಿತ ಮಂಡಳಿ ಚುನಾವಣೆ ಮುಗಿದ ನಂತರ ಸಂಘದ ಮಂಡಳಿಯ ಚುನಾವಣೆ ಸಂಬಂಧ ನೇಮಕವಾದ ರಿಟರ್ನಿಂಗ್ ಅಧಿಕಾರಿಯು ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವ ಬಗ್ಗೆ ಕ್ರಮವಿಡತಕ್ಕದ್ದಾಗಿದೆ. ಪದಾಧಿಕಾರಿಗಳ ಚುನಾವಣೆ ಸಂಬಂಧ ಆಯೋಗವು ಈಗಾಗಲೇ ಉಲ್ಲೇಖ (2) ರಲ್ಲಿ ಕಾಣಿಸಿರುವಂತೆ ಸುತ್ತೋಲೆಯನ್ನು ಹೊರಡಿಸಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 29-ಎಫ್(4) ರೀತ್ಯಾ ಸಹಕಾರ ಸಂಘದ ಪದಾಧಿಕಾರಿಗಳ ಪದಾವಧಿಯು ಚುನಾವಣೆಯ ದಿನಾಂಕದಿಂದ 5 ವರ್ಷಗಳಾಗಿರತಕ್ಕದ್ದು ಮತ್ತು ಅದು ಮಂಡಲಿಯ ಅವಧಿಯ ಜೊತೆಗೆ ಅಂತ್ಯಗೊಳ್ಳತಕ್ಕದ್ದು ಎಂದಿರುತ್ತದೆ.

ಅಧಿನಿಯಮ ಪ್ರಕರಣ 29-ಎಫ್(5) ರಂತೆ ಸಹಕಾರ ಚುನಾವಣಾ ಆಯೋಗವು, ಸಾಮಾನ್ಯ ಚುನಾವಣೆಯ ತರುವಾಯ ಮಂಡಲಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ದಿನಾಂಕದಿಂದ 15 ದಿನಗಳೊಳಗಾಗಿ, ಅಧ್ಯಕ್ಷನ ಅಥವಾ ಸಭಾಪತಿಯ ಪದಕ್ಕೆ, ಉಪಾಧ್ಯಕ್ಷನ ಅಥವಾ ಉಪಸಭಾಪತಿಯ ಪದಕ್ಕೆ ಮತ್ತು ಸಹಕಾರ ಸಂಘದ ಉಪವಿಧಿಗಳ ಪ್ರಕಾರ ಚುನಾಯಿಸುವುದು ಅಗತ್ಯವಾಗಿರುವಂಥ ಇತರ ಪದಾಧಿಕಾರಿಗಳ ಪದಕ್ಕೆ ಚುನಾವಣೆಗಳನ್ನು ನಡೆಸತಕ್ಕದ್ದು ಎಂದಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 (ಸಂಕ್ಷಿಪ್ತವಾಗಿ 'ನಿಯಮ') ರ ನಿಯಮ 14ಎಜಿ ದಲ್ಲಿ ಪದಾಧಿಕಾರಿಗಳ ಚುನಾವಣೆ ಸಂಬಂಧ ವಿವರಿಸಲಾಗಿದೆ. ಅದರಂತೆ ಆಡಳಿತ ಮಂಡಲಿಯ ನಿರ್ದೇಶಕರ ಸಾಮಾನ್ಯ ಚುನಾವಣೆಯನ್ನು ನಡೆಸಲು ನೇಮಕವಾದ ರಿಟರ್ನಿಂಗ್ ಅಧಿಕಾರಿಯು ಪದಾಧಿಕಾರಿಗಳ ಚುನಾವಣೆಯನ್ನು ನಡೆಸಲು ರಿಟರ್ನಿಂಗ್ ಅಧಿಕಾರಿಯಾಗಿರುತ್ತಾರೆ. ನಿಯಮ 14ಎಜಿ (3) ರಲ್ಲಿ ತಿಳಿಸಿರುವಂತೆ ರಿಟರ್ನಿಂಗ್

---2

ಅಧಿಕಾರಿಯು ಸಾಮಾನ್ಯ ಚುನಾವಣೆಯ ನಂತರ ಆಡಳಿತ ಮಂಡಲಿ ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ದಿನಾಂಕದಿಂದ 15 ದಿನಗಳೊಳಗಾಗಿ ಪದಾಧಿಕಾರಿಗಳನ್ನು ಚುನಾಯಿಸಲು ಆಡಳಿತ ಮಂಡಳಿಯ ಎಲ್ಲಾ ಮತದಾನದ ಹಕ್ಕುಳ್ಳ ನಿರ್ದೇಶಕರುಗಳ ಸಭೆಯನ್ನು ಕರೆಯತಕ್ಕದ್ದಾಗಿದೆ. ಅಂಥ ಸಭೆಯನ್ನು ಸಭೆಯ ಸ್ಥಳ, ದಿನಾಂಕ ಮತ್ತು ವೇಳೆಯನ್ನುಳ್ಳ 7 ಸ್ಪಷ್ಟ ದಿನಗಳ ನೋಟೀಸ್‌ನ್ನು ನೋಂದಾಯಿತ ಅಂಚೆಯ ಮೂಲಕ ನೀಡಿ ಕರೆಯತಕ್ಕದ್ದಾಗಿದೆ. ಪದಾಧಿಕಾರಿಗಳ ಚುನಾವಣೆಯನ್ನು ನಿಯಮ 14 ಎಜಿ ದ ಅವಕಾಶದಂತೆ ಕ್ರಮ ಅನುಸರಿಸಿ, ರಿಟರ್ನಿಂಗ್ ಅಧಿಕಾರಿಯು ನಡೆಸತಕ್ಕದ್ದು.

ಉಲ್ಲೇಖಿತ ಅಧಿಸೂಚನೆಯಂತೆ ನಡೆಸಲಾದ ಹೊಸದಾಗಿ ಚುನಾಯಿತರಾದ ಮಂಡಲಿಯು /ಪದಾಧಿಕಾರಿಗಳ ಚುನಾವಣೆ ಆದ ನಂತರವೂ ಸಹ ಪ್ರಸ್ತುತ ಇರುವ ಮಂಡಳಿಯ ಪದ ಅವಧಿಯು ಮುಗಿದ ಕೂಡಲೇ ಅಧಿಕಾರ ವಹಿಸಿಕೊಳ್ಳತಕ್ಕದ್ದಾಗಿದೆ ಈ ಸಂಬಂಧ ಅಧಿನಿಯಮ ಪ್ರಕರಣ 28 ಬಿ(1) ಮತ್ತು 29-ಎ ಅನ್ನು ಗಮನಿಸಬಹುದಾಗಿದೆ. ಈ ವಿಷಯವಾಗಿ ಆಯೋಗವು ಉಲ್ಲೇಖ (3) ರಲ್ಲಿ ಕಾಣಿಸಿರುವಂತೆ ಸುತ್ತೋಲೆಯನ್ನು ಹೊರಡಿಸಿದೆ.

29-A (1) :- "The term of office of the members of the board shall commence on the date on which the majority of the elected members of the board assume office or the term of the outgoing board expires, whichever is later"

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಉಲ್ಲೇಖಿತ ಅಧಿಸೂಚನೆಯಂತೆ ಸಂಬಂಧಿಸಿದ ಸಹಕಾರ ಸಂಘಗಳ ಮಂಡಲಿಗಳ ಸಾಮಾನ್ಯ ಚುನಾವಣೆಯ ಮುಗಿದ ನಂತರ ರಿಟರ್ನಿಂಗ್ ಅಧಿಕಾರಿಯು ಅಧಿನಿಯಮ /ನಿಯಮ / ಉಪವಿಧಿಗಳ ಅವಕಾಶದಂತೆ ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವ ಬಗ್ಗೆ ಪ್ರಕ್ರಿಯೆಯನ್ನು ಪ್ರಾರಂಭಿಸತಕ್ಕದ್ದು ಎಂದು ನಿರ್ದೇಶಿಸಲಾಗಿದೆ.

(ಎನ್.ಸಿ. ಮುನಿಯಪ್ಪ)
**ಸಹಕಾರ ಚುನಾವಣಾ ಆಯುಕ್ತರು**
**ಬೆಂಗಳೂರು**

**ಇವರಿಗೆ**

1) ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ------------------ ಜಿಲ್ಲೆ ಇವರಿಗೆ ಕಳುಹಿಸುತ್ತಾ ಸಂಬಂಧಿಸಿದ ಫೆಡರಲ್ ಸಂಘಗಳ ರಿಟರ್ನಿಂಗ್ ಅಧಿಕಾರಿಗಳಿಗೆ ವಿಷಯದ ಬಗ್ಗೆ ಸೂಕ್ತ ಕ್ರಮವಿಡಲು ಸೂಚಿಸುವಂತೆ ಕೋರಿದೆ.
2) ಸಂಬಂಧಿಸಿದ ಸಂಘಗಳ ರಿಟರ್ನಿಂಗ್ ಅಧಿಕಾರಿಯವರಿಗೆ ------------------------------ ------------------------------------------------------------------------
3) ವ್ಯವಸ್ಥಾಪಕ ನಿರ್ದೇಶಕರು, ಡಿ.ಸಿ.ಸಿ ಬ್ಯಾಂಕ್ ನಿ., / ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ., -------------------------- ಸೂಕ್ತ ಕ್ರಮಕ್ಕಾಗಿ
4) ಸಹಕಾರ ಸಂಘಗಳ ಜಂಟಿ ನಿಬಂಧಕರು ------------------ಪ್ರಾಂತ
5) ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರು ----------------

**ಪ್ರತಿಗಳು**

1) ಸಹಕಾರ ಸಂಘಗಳ ನಿಬಂಧಕರು, ನಂ.1 ಅಲಿ ಆಸ್ಕರ್ ರಸ್ತೆ, ಬೆಂಗಳೂರು-52
2) ಕೇಂದ್ರ ಕಛೇರಿಯ ಎಲ್ಲಾ ಅಪರ ನಿಬಂಧಕರುಗಳಿಗೆ --------------------
3) ಕೇಂದ್ರ ಕಛೇರಿಯ ಎಲ್ಲಾ ಜಂಟಿ ನಿಬಂಧಕರುಗಳಿಗೆ --------------------
4) ರಕ್ಷಾ ಕಡತ /ಸುತ್ತೋಲೆ ಕಡತ